ಓ.ಎಸ್. ನಂ. 15/2023

ಪಿ.ಡಬ್ಲ್ಯು: 01 (ವಸಂತಕುಮಾರ)

ದಿನಾಂಕಃ 14-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ – ಶ್ರೀ</u>** <u>ಹೆಚ್ ಎನ್ ಪ್ರತಿವಾದಿ ಪರ</u> **<u>ವಕೀಲರಿಂದ.</u>**

ನಾನು ದ್ವಿತೀಯ ಪಿ ಯು ಸಿ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಾಯಿ 2 ನೇ ತರಗತಿಯವರಿಗೆ ವಿಧ್ಯಾಭ್ಯಾಸ ಮಾಡಿರುತ್ತಾರೆ. ಶಾಂತವೀರಪ್ಪ ತಂದೆ ಲೇಟ್ ಗುರಪ್ಪ ನನಗೆ ಸಂಬಂಧಿಕರಲ್ಲ, ಅವರು ಬೇರೆ ಜನಾಂಗದವರು, ಅವರು ನಮ್ಮ ಊರಿಗೆ ಬಂದು ಹೋಗುತ್ತಿದ್ದರು. ಶಾಂತವೀರಪ್ಪ ತಂದೆ ಲೇಟ್ ಗುರಪ್ಪ ಅವರ ಪತ್ನಿಯ ಹೆಸರು ಕೊಟ್ರಮ್ಮ ಎಂದರೆ ಹೌದು, ಅವರಿಗೆ ಸಿದ್ರಾಮಮ್ಮ ಎಂಬ ಮತ್ತೊಂದು ಹೆಸರು ಇತ್ತು. ಸಿದ್ರಾಮಮ್ಮ ಎಂಬ ಮತ್ತೊಂದು ಹೆಸರು ಇತ್ತು ಎಂಬ ಬಗ್ಗೆ ದಾಖಲಾತಿಯನ್ನು ಹಾಜರು ಮಾಡಿಲ್ಲ. ಕರಿಬಸವರಾಜ, ಕೊಟ್ರೇಶ ಮತ್ತು ಮಂಜುಳಾರವರು ಮೃತ ಶಾಂತವೀರಪ್ಪ ತಂದೆ ಲೇಟ್ ಗುರಪ್ಪರವರ ಮಕ್ಕಳು ಎಂದರೆ ಹೌದು. 3 ಮತ್ತು 4 ನೇ ಪ್ರತಿವಾದಿಗಳು ಕರಿಬಸವರಾಜನ ಮಕ್ಕಳು ಎಂದರೆ ಹೌದು. ಪ್ರತಿವಾದಿ 5 ಮತ್ತು 6 ರವರು ಮಂಜುಳಾರವರ ಮಕ್ಕಳು ಎಂದರೆ ಹೌದು. ದಿಃ 26-10-2010 ರಂದು ಜಿ ಶಾಂತವೀರಪ್ಪರವರು ದಾವಣಗೆರೆಯಲ್ಲಿ ಮೃತಪಟ್ಟಿದ್ದರು ಎಂದರೆ 1 ನೇ ಪ್ರತಿವಾದಿ ತನ್ನ ತಂದೆ 2003 ರಲ್ಲಿ ತೀರಿಕೊಂಡಿದ್ದಾರೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ನನಗೆ ಗೊತ್ತಿದ್ದರೂ ಸಹ 2003 ರಲ್ಲಿ ಮೃತಪಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 27-08-2017 ರಂದು ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**<u>ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.</u>**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.